ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	467
ಸದಸ್ಯರ ಹೆಸರು	:	ಶ್ರೀ ಆರ್.ಬಿ. ತಿಮ್ಮಾಪೂರ
ಉತ್ತರಿಸುವ ದಿನಾಂಕ	:	16-12-2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯಾದ್ಯಂತ ಕಳೆದ ಎರಡು ದಶಕದಿಂದ ಖಾಲಿ ಉಳಿದಿರುವ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು; ಯಾವ ಯಾವ ಇಲಾಖೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಲಾಗಿದೆ;	ಸರ್ಕಾರದ ವಿವಿಧ ಇಲಾಖೆ, ನಿಗಮ, ಮಂಡಳಿಗಳು, ವಿಶ್ವವಿದ್ಯಾಲಯಗಳು, ಸಹಕಾರಿ ಸಂಸ್ಥೆಗಳು ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್‌ಬಿಸಿ 2001 ಬೆಂಗಳೂರು, ದಿನಾಂಕ: 21.11.2001 ಮತ್ತು ಡಿಪಿಎಆರ್ 13 ಎಸ್‌ಬಿಸಿ 2001 ಬೆಂಗಳೂರು, ದಿನಾಂಕ: 01.06.2002 ರನ್ವಯ 2001 ರಲ್ಲಿ ಪರಿಶಿಷ್ಟ ಜಾತಿಯ 14624 ಮತ್ತು ಪರಿಶಿಷ್ಟ ಪಂಗಡದ 4491 ಒಟ್ಟು 19115 ಹುದ್ದೆಗಳನ್ನು ಗುರುತಿಸಲಾಗಿತ್ತು. ಅವುಗಳಲ್ಲಿ ಇಲ್ಲಿಯವರೆಗೆ ಪರಿಶಿಷ್ಟ ಜಾತಿ – 13185 ಮತ್ತು ಪರಿಶಿಷ್ಟ ಪಂಗಡ – 3773 ಒಟ್ಟು 16958 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಕೆಲವು ಸಂಸ್ಥೆಗಳು ಮುಚ್ಚಲ್ಪಟ್ಟ ಹಾಗೂ ಆರ್ಥಿಕ ಸಂಕಷ್ಟದ ಕಾರಣಗಳಿಂದ 165 ಹುದ್ದೆಗಳಿಗೆ ಭರ್ತಿಯಿಂದ ವಿನಾಯಿತಿ ನೀಡಲಾಗಿದೆ. ಪ್ರಸ್ತುತ 20 ಇಲಾಖೆಗಳಲ್ಲಿ ಪರಿಶಿಷ್ಟ ಜಾತಿಯ 1630 ಮತ್ತು ಪರಿಶಿಷ್ಟ ಪಂಗಡದ 802 ಒಟ್ಟು 2432 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುತ್ತದೆ. ಅವುಗಳ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ.

ಗುರುತಿಸಿರುವ, ಭರ್ತಿ ಮಾಡಿರುವ ಮತ್ತು ಭರ್ತಿ ಮಾಡಲು ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ವಿವರ

ಕ್ರ. ಸಂ	ವಿಷಯ	ಪ.ಜಾತಿ	ಪ.ಪಂಗಡ	ಒಟ್ಟು
1	ಗುರುತಿಸಲಾದ ಒಟ್ಟು ಹುದ್ದೆಗಳು	14624	4491	19115
2	ಈಗಾಗಲೇ ಭರ್ತಿ ಮಾಡಲಾಗಿರುವ ಹುದ್ದೆಗಳು	13185	3773	16958
3	ಭರ್ತಿಯಿಂದ ವಿನಾಯಿತಿ ನೀಡಲಾದ ಹುದ್ದೆಗಳು	117	48	165
4	ಭರ್ತಿ ಮಾಡಲು ಬಾಕಿ ಇರುವ ಹುದ್ದೆಗಳು	1322	670	1992

2001 ನಂತರ ಇಲ್ಲಿಯವರೆಗೆ ಗುರುತಿಸಲಾಗಿರುವ ಬ್ಯಾಕ್‌ಲಾಗ್ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

ಗುರುತಿಸಿರುವ, ಭರ್ತಿ ಮಾಡಿರುವ ಮತ್ತು ಭರ್ತಿ ಮಾಡಲು ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ವಿವರ

ಕ್ರ. ಸಂ	ವಿಷಯ	ಪ.ಜಾತಿ	ಪ.ಪಂಗಡ	ಒಟ್ಟು
1	ಗುರುತಿಸಲಾದ ಒಟ್ಟು ಹುದ್ದೆಗಳು	1789	472	2261
2	ಈಗಾಗಲೇ ಭರ್ತಿ ಮಾಡಲಾಗಿರುವ ಹುದ್ದೆಗಳು	1481	340	1821
3	ಭರ್ತಿ ಮಾಡಲು ಬಾಕಿ ಇರುವ ಹುದ್ದೆಗಳು	308	132	440

"ಒಟ್ಟಾರೆಯಾಗಿ ಶೇ.89% ಹುದ್ದೆಗಳು ಭರ್ತಿಯಾಗಿರುತ್ತವೆ" ಪ್ರಸ್ತುತ 20

		ಇಲಾಖೆಗಳಲ್ಲಿ 2001 ರವರೆಗೆ ಗುರುತಿಸಿರುವ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಮತ್ತು 2001 ರ ನಂತರ ಗುರುತಿಸಿರುವ ಹುದ್ದೆಗಳಲ್ಲಿ ಪ್ರಸ್ತುತ ಪರಿಶಿಷ್ಟ ಜಾತಿ - 1630 ಮತ್ತು ಪರಿಶಿಷ್ಟ ಪಂಗಡ - 802 ಒಟ್ಟು 2432 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುತ್ತದೆ. **ಇಲಾಖಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.**
ಅ)	ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ಒಂದೇ ಬಾರಿಗೆ ಭರ್ತಿ ಮಾಡಲು ಸರ್ಕಾರ ಚಿಂತನೆ ನಡೆಸಿದೆಯೇ?	ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಉಸ್ತುವಾರಿಗಾಗಿ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪಸಮಿತಿ ಸಭೆಯು ದಿನಾಂಕ: 17.01.2020 ರಂದು ನಡೆದಿದ್ದು, ಸದರಿ ಸಭೆಯಲ್ಲಿ ವಿವಿಧ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಮುಖ್ಯ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಪ್ರಥಮ ಆದ್ಯತೆಯ ಮೇರೆಗೆ ಭರ್ತಿ ಮಾಡುವಂತೆ ನಿರ್ದೇಶನ ನೀಡಲಾಗಿದೆ. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಇವರಿಂದ ಬ್ಯಾಕ್‌ಲಾಗ್ ಹುದ್ದೆಗಳು ಬಾಕಿ ಇರುವ ಸಂಬಂಧಪಟ್ಟ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ, ಆಯುಕ್ತರು, ನಿರ್ದೇಶಕರು, ವ್ಯವಸ್ಥಾಪಕ ನಿರ್ದೇಶಕರು, ನಿಬಂಧಕರು, ಕುಲಸಚಿವರುಗಳಿಗೆ ದಿನಾಂಕ:10.02.2020, 12.02.2020, 26.05.2020, 25.06.2020, 18.12.2020, 23.04.2021 25.08.2021 ಮತ್ತು 11.10.2021ರ ಪತ್ರಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಪ್ರಥಮ ಆದ್ಯತೆಯ ಮೇರೆಗೆ ಭರ್ತಿ ಮಾಡುವಂತೆ ಕೋರಲಾಗಿರುತ್ತದೆ. ಪ್ರತಿವಾರ ನಡೆಯುವ ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಸಭೆಯಲ್ಲಿ ಎಲ್ಲಾ ಇಲಾಖೆಗಳಿಂದ ಬ್ಯಾಕ್‌ಲಾಗ್ ಹುದ್ದೆಗಳ ಬಗ್ಗೆ ಪರಿಶೀಲನೆ ನಡೆಸಿ ಪ್ರಥಮ ಆದ್ಯತೆಯ ಮೇರೆಗೆ ಭರ್ತಿ ಮಾಡುವಂತೆ ಸೂಚನೆಯನ್ನು ನೀಡಲಾಗಿದೆ.

ಸಕಇ 116 ಎಸ್‌ಟಿಸಿ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

ಅನುಬಂಧ -1

ಸರ್ಕಾರದ ವಿವಿಧ ಇಲಾಖೆಗಳು/ ನಿಗಮಗಳು/ಮಂಡಳಿಗಳು/ವಿಶ್ವವಿದ್ಯಾಲಯಗಳು/ಸಹಕಾರ ಸಂಸ್ಥೆಗಳಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳ ವಿವರ

ಕ್ರಮ ಸಂಖ್ಯೆ	ಇಲಾಖೆ/ನಿಗಮ/ ಮಂಡಳಿ/ವಿಶ್ವವಿದ್ಯಾಲಯ/ಸಹಕಾರ ಸಂಸ್ಥೆಗಳು ಇತ್ಯಾದಿ	ಭರ್ತಿ ಮಾಡಲು ಬಾಕಿ ಇರುವ ಹುದ್ದೆಗಳ ಸಂಖ್ಯೆ (2001 ರಲ್ಲಿ ಗುರುತಿಸಿರುವ ಹುದ್ದೆಗಳ ಸಂಖ್ಯೆ)			ಭರ್ತಿ ಮಾಡಲು ಬಾಕಿ ಇರುವ ಹುದ್ದೆಗಳ ಸಂಖ್ಯೆ (2001 ರ ನಂತರ ಗುರುತಿಸಿರುವ ಹುದ್ದೆಗಳ ಸಂಖ್ಯೆ)			ಒಟ್ಟು ಹುದ್ದೆಗಳ ಸಂಖ್ಯೆ
		ಪ.ಜಾ	ಪ.ಪಂ	ಒಟ್ಟು	ಪ.ಜಾ	ಪ.ಪಂ	ಒಟ್ಟು	
1	2	3	4	5	6	7	8	9
1	ಉನ್ನತ ಶಿಕ್ಷಣ ಇಲಾಖೆ	341	335	676	77	72	149	825
2	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ	287	145	432	0	0	0	432
3	ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	269	75	344	0	0	0	344
4	ಲೋಕೋಪಯೋಗಿ ಮತ್ತು ಜಲಸಂಪನ್ಮೂಲ ಇಲಾಖೆ	182	1	183	0	0	0	183
5	ಸಾರಿಗೆ ಇಲಾಖೆ	1	0	1	151	26	177	178
6	ಸಹಕಾರ ಇಲಾಖೆ	76	18	94	26	10	36	130
7	ರೇಷ್ಮೆ ಇಲಾಖೆ	92	26	118	0	0	0	118
8	ನಗರಾಭಿವೃದ್ಧಿ ಇಲಾಖೆ	14	12	26	6	2	8	34
9	ತೋಟಗಾರಿಕೆ ಇಲಾಖೆ	7	5	12	16	6	22	34
10	ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ	21	7	28	0	0	0	28
11	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	5	1	6	9	12	21	27
12	ಇಂಧನ ಇಲಾಖೆ	9	16	25	0	0	0	25
13	ಅರಣ್ಯ ಇಲಾಖೆ	0	0	0	19	3	22	22
14	ವೈದ್ಯಕೀಯ ಶಿಕ್ಷಣ ಇಲಾಖೆ	3	15	18	0	0	0	18
15	ಕೃಷಿ ಇಲಾಖೆ	8	8	16	0	0	0	16
16	ಕನ್ನಡ ಮತ್ತು ಸಂಸ್ಕೃತಿ ಇಲಾಖೆ	4	2	6	0	1	1	7
17	ಒಳಾಡಳಿತ ಇಲಾಖೆ	2	3	5	0	0	0	5
18	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	0	0	0	2	0	2	2
19	ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆ	1	0	1	1	0	1	2
20	ಕಂದಾಯ ಇಲಾಖೆ	0	1	1	1	0	1	2
	ಒಟ್ಟು	1322	670	1992	308	132	440	2432